ಇ) ಹೌದು.

ಈ) ಅನುಸೂಚಿಗಳ ರದ್ದತಿಗೆ ಕಾರಣರಾದ ಚಾಲಕ : ನಿರ್ವಾಹಕರು ಅನಧಿಕೃತ ಗೈರು ಹಾಜರಾದವರ ವಿರುದ್ದ ಶಿಸ್ತಿನ ಕ್ರಮಕೈಗೊಳ್ಳುವುದು; ಹೊಸದಾಗಿ ಚಾಲಕ: ನಿರ್ವಾಹಕರನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳುವುದು; ಹಾಗೂ ಹಳೆಯ ಬಸ್ಸುಗಳನ್ನು ಹಿಂತೆಗೆದುಕೊಂಡು ಹೊಸ ಬಸ್ಸುಗಳನ್ನು ಹಾಕುವ ಕ್ರಮ ಕೈಗೊಳ್ಳಲಾಗಿದೆ.

ವಿಷಯ: ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆಗಳ ನಿರ್ಮಾಣ ಕಾರ್ಯವಿಳಂಬ.

2540 (4057)

ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಸವಣೂರು ಪಟ್ಟಣದಲ್ಲಿ ಎಷ್ಟು ಮನೆಗಳನ್ನು ಕಟ್ಟಲು ಯಾವಾಗ ಮಂಜೂರಾತಿ ನೀಡಲಾಗಿದೆ?

ಆ) ಸದರಿ ಮನೆಗಳನ್ನು ಕಟ್ಟಲು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ?

ಇ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರಿ ಮನೆ ಕಟ್ಟಲು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಸವಣೂರು ಪಟ್ಟಣದ ವಡ್ಡರ ಓಣಿ ಕೊಳಚೆ ಪ್ರದೇಶದಲ್ಲಿ ಮಂಡಳಿಯ ವತಿಯಿಂದ 100 ಮನೆಗಳನ್ನು ಕಟ್ಟಲು (ಡಿ.ಆರ್.ಸಂಖ್ಯೆ:63:95-96ರ ಮೂಲಕ) ದಿನಾಂಕ 14-2-96ರಂದು ಮಂಜೂರಾತಿ ನೀಡಲಾಗಿದೆ.

ಆ) ಶ್ರೀ ಎಸ್.ಬಿ.ಪಾಟೀಲ್ ಎಂಬ ಗುತ್ತಿಗೆದಾರರ ಟೆಂಡರ್‌ಗೆ ದಿನಾಂಕ 7-6-97ರಂದು ಮಂಜೂರಾತಿ ನೀಡಲಾಗಿತ್ತು. ಆದರೆ ಟೆಂಡರ್ ಅವಧಿ ಮುಗಿದ ನಂತರ ಟೆಂಡರ್‌ಗೆ ಒಪ್ಪಿಗೆ ನೀಡಲಾಗಿರುವ ಕಾರಣ ಈ ಗುತ್ತಿಗೆದಾರರು ಕಾಮಗಾರಿಯ ಕರಾರನ್ನು ಕಾರ್ಯಗತಗೊಳಿಸಲು ನಿರಾಕರಿಸಿರುತ್ತಾರೆ.

ಇ) ಈ ಕಾಮಗಾರಿಗೆ ಪುನಃ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿದ ನಂತರ ಮನೆಗಳ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ: ಸವಣೂರು ತಾಲ್ಲೂಕು ಎ.ಪಿ.ಎಂ.ಸಿ. ರಸ್ತೆಗಳ ದುರಸ್ತಿ.